ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ ,
ಶ್ರೀರಂಗಪಟ್ಟಣ

ಸಿ.ಸಿ. 568/2023

| | |
|---|---|
| ಸಿ.ಡಬ್ಲ್ಯೂ : | 1 |
| ಪಿ.ಡಬ್ಲ್ಯೂ : | 1 |

| | | |
|---|---|---|
| ಸಾಕ್ಷಿದಾರರ ಹೆಸರು | : | ಅನಿಲ್ ಕುಮಾರ್ |
| ತಂದೆ/ ಪತಿಯ ಹೆಸರು | : | ಪಾರ್ಥ ನಾರಾಯಣಗೌಡ |
| ವಯಸ್ಸು | : | 51 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸ | : | ಹಂಗರಹಳ್ಳಿ |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕ: 29.12.2025**

**ಮುಖ್ಯ ವಿಚಾರಣೆ: ಮಾನ್ಯ ಎ ಪಿ ಪಿ ರವರಿಂದ**

ನನಗೆ ಆರೋಪಿತರು ಗೊತ್ತಿರುತ್ತಾರೆ. ಸರ್ವೆ ನಂ.147/1 ರಲ್ಲಿ ಆರೋಪಿತರ ವಿರುದ್ಧ ತಾತ್ಕಲಿಕ ನಿರ್ಬಂದಕಾಜ್ಞೆ ಇದ್ದರೂ ಸಹಾ ಆರೋಪಿತರಿಬ್ಬರು 2 ವರ್ಷಗಳ ಹಿಂದೆ ನಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ, ನನಗೆ ಬಾಯಿಗೆ ಬಂದಂತೆ ಬೈದು, ಜಗಳ ಮಾಡಿ ನನ್ನ ತಲೆಗೆ ಹಾಗೂ ಹೊಟ್ಟೆಗ ಹೊಡೆದಿರುತ್ತಾರೆ ಹಾಗೂ ಪ್ರಾಣ ಬೆದರಿಕೆ ಸಹಾ ಹಾಕಿರುತ್ತಾರೆ. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ಈಗ ದೂರನ್ನು ತೋರಿಸಿದ್ದು, ಅದರಲ್ಲಿ ಇರುವ ಅವರ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಪೊಲೀಸರು ಸ್ಥಳಕ್ಕೆ ಬಂದು ಮಹಾದೇವು ಮತ್ತು ಕುಮಾರ್ ರವರ ಸಮಕ್ಷಮ ಬೆಳಗ್ಗೆ 11.45 ಗಂಟೆಯಿಂದ 12.30 ರವರೆಗೆ ಮಹಜರ್ ಮಾಡಿರುತ್ತಾರೆ. ಪೊಲೀಸರು ಘಟನಾ ಸ್ಥಳದ

ಫೋಟೋವನ್ನು ಸಹಾ ತೆಗೆದುಕೊಂಡಿರುತ್ತಾರೆ. ಈ ಘಟನೆ ಸಂಬಂಧ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ.

## ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ

ಹೈಕೋರ್ಟ್ ಆದೇಶದ ಪ್ರತಿಯನ್ನು ಹಾಗೂ ನಿರ್ಬಂಧಕಾಜ್ಞೆ ಆದೇಶದ ಪ್ರತಿಯನ್ನು ನಾನು ಪೊಲೀಸರಿಗೆ ನೀಡಿರುತ್ತೇನೆ.

ಗಲಾಟೆ ನಡೆದಿದೆ ಎನ್ನಲಾದ ಸ್ಥಳದಲ್ಲಿ ಸುತ್ತಾ ಮುತ್ತಾ ಮನೆಗಳು ಇದ್ದು ಅಲ್ಲಿ ರಸ್ತೆಯೂ ಸಹಾ ಇರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಮಹಜರ್ ಸಂದರ್ಭದಲ್ಲಿ ತೆಗೆದ ಫೋಟೋವನ್ನು ತೋರಿಸಿ ಅಲ್ಲಿ ರಸ್ತೆ ಇದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಅಲ್ಲಿ ಸಾರ್ವಜನಿಕರು ಹಾಗೂ ಆರೋಪಿತರು ಓಡಾಡಲು ರಸ್ತೆ ಇದ್ದರು ಸಹಾ ಇಲ್ಲ ಎಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ನಾವು ಪಾಯ ತೆಗೆಯುತ್ತಿದ್ದ ಸ್ಥಳದ ಅಕ್ಕ ಪಕ್ಕದಲ್ಲಿ ಮಹೇಶ್ ಎನ್ನುವವರು ಇದ್ದು ಸುತ್ತಾ ಮುತ್ತಾ ಖಾಲಿ ಜಾಗ ಇರುತ್ತದೆ.

ನಾಗೇಶ್ , ನವೀನ್ ಕುಮಾರ್ ಹಾಗೂ ಮಹಾದೇವುರವರುಗಳು ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ಅವರುಗಳು ನನಗೆ ಸ್ನೇಹಿತರು ಎಂದರೆ ಸರಿಯಲ್ಲ. ಅವರುಗಳು ನಮ್ಮ ಊರಿನವರು ಎಂದರೆ ಸರಿ. ಗಲಾಟೆಯಾದ ಸಂದರ್ಭದಲ್ಲಿ ಮಹೇಶ್ ರವರು ಬಂದಿದ್ದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಗಲಾಟೆ ನಡೆದ ಸಂದರ್ಭದಲ್ಲಿ ನೀವು , ಆರೋಪಿತರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಮನೆ ಒಳಗಡೆ ಲಕ್ಷ್ಮಿ, ಮಹಾದೇವು, ನಾಗೇಶ್ ಹಾಗೂ ನವೀನ್ ರವರುಗಳು ಇದ್ದರು ಎಂದು ನುಡಿಯುತ್ತಾರೆ. ಮಹಾದೇವು, ನಾಗೇಶ್ ಹಾಗೂ ನವೀನ್ ರವರುಗಳ ಮನೆಯಿಂದ ನನ್ನ ಮನೆಗೆ ಸುಮಾರು ೫೦೦ ಮೀಟರ್ ಅಂತರ ಇರುತ್ತದೆ. ಆ ದಿನ ಮಹಾದೇವು, ನಾಗೇಶ್ ಹಾಗೂ ನವೀನ್ ರವರುಗಳು ಅವರವರ ಮನೆಯಲ್ಲಿ ಇದ್ದರು ಎಂದರೆ ಸರಿ. ಆರೋಪಿತರು ಕೈಯಿಂದ ನನಗೆ ಹಲ್ಲೆ ಮಾಡಿರುತ್ತಾರೆ. ಈ ಸಂಬಂಧ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ. ನಿಮಗೆ ಯಾವುದಾದರೂ ಗಾಯಗಳಾಗಿತ್ತೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ.

ನಿಮ್ಮ ಜಾಗದ ಪಕ್ಕದಲ್ಲಿ ಆರೋಪಿತರಿಗೆ ಸೇರಿದ ಜಾಗ ಇರುತ್ತದೆ ಎಂದರೆ ಸರಿಯಲ್ಲ. ಅಲ್ಲಿ ಆರೋಪಿತರು ಓಡಾಡಲು ರಸ್ತೆ ಇರುತ್ತದೆ ಎಂದರೆ ಸರಿಯಲ್ಲ. ನಿಮಗೆ ಸೇರಿದ ಒಟ್ಟು ಎಷ್ಟು ಜಮೀನು ಇರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು 3 ಎಕರೆ 26 ಗುಂಟೆ ಎಂದು ನುಡಿಯುತ್ತಾರೆ. ಸದರಿ ಜಮೀನು ನನ್ನ ತಂದೆಯ ಹೆಸರಿನಲ್ಲಿ

ಇರುತ್ತದೆ. ನಿಮ್ಮ ಜಮೀನಿನ ಸುತ್ತಾ ಮುತ್ತಾ ರೆವಿನ್ಯೂ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಪೊಲೀಸರು ಮಹಜರ್ ಗೆ ಪೊಲೀಸ್ ಠಾಣೆಯಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಬರವಣಿಗೆ ಆಗಿಲ್ಲ ಎಂದರೆ ಸರಿಯಲ್ಲ. ಪಂಚರರನ್ನು ಪೊಲೀಸರು ಕರೆದಿರುತ್ತಾರೆ.

ಅಲ್ಲಿ ರಸ್ತೆ ಇದ್ದು ಆರೋಪಿತರಿಗೆ ರಸ್ತೆಯಲ್ಲಿ ಓಡಾಡಲು ನಾನು ತೊಂದರೆ ನೀಡುತ್ತಿದ್ದು ಹಾಗೂ ಅವರಿಗೆ ತೊಂದರೆಯಾಗಲೆಂದು ಈ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಪೊಲೀಸರು ಮಹೇಶ್ ರವರ ಹೇಳಿಕೆಯನ್ನು ಪಡೆದುಕೊಂಡಿದ್ದಾರೆಯೇ ಎಂದು ನನಗೆ ಗೊತ್ತಿರುವುದಿಲ್ಲ. ಸಾಕ್ಷಿಯು ಮುಂದುವರೆದು ಮಹಜರ್ ಸಂದರ್ಬದಲ್ಲಿ ಮಹೇಶ್ ರವರ ಹೇಳಿಕೆ ನೀಡಿಲ್ಲ ಎಂದು ನುಡಿಯುತ್ತಾರೆ. ಮಹೇಶ್ ರವರ ಕುಟುಂಬದವರನ್ನು ಪೊಲೀಸರು ವಿಚಾರಣೆ ಮಾಡಿರುವುದಿಲ್ಲ. ನಾನು ಹೇಳಿರುವಂತೆ ಯಾವುದೇ ಜಗಳ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ರಸ್ತೆಯಲ್ಲಿ ಓಡಾಡಲು ತೊಂದರೆ ನೀಡುವ ಸಲುವಾಗಿ ಈ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.